ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದರಿಂದ ಹಣಕಾಸಿನ ಸಮತೋಲನವನ್ನು ಕಾಪಾಡುವ ದೃಷ್ಟಿಯಿಂದ ಅನುದಾನವನ್ನು ಕಡಿತ ಮಾಡತಕ್ಕ ಸಂದರ್ಭದಲ್ಲಿ ಐಟಿಐ ಸಂಸ್ಥೆಗಳು ಸಹ ಇದರಲ್ಲಿ ಅಪೈಯಾಗಿವೆ. ಹಾಗಾಗಿ ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ಹೇಳುವುದಾದರೆ, ನಮ್ಮಲ್ಲಿ ಐಟಿಐಗಳು, ಸುಮಾರು 324 ಸಂಸ್ಥೆಗಳು ಇವೆ. ಅದರಲ್ಲಿ ಈಗಾಗಲೇ ಅನುದಾನಕ್ಕೆ ಒಳಪಟ್ಟಿರತಕ್ಕವು 112 ಐಟಿಐ ಸಂಸ್ಥೆಗಳು. ಅಲ್ಲಿರತಕ್ಕ ಸಿಬ್ಬಂದಿಗಳಿಗೆ ಅನುದಾನವನ್ನು ಕೊಡುತ್ತಿದ್ದೇವೆ. ಹಣಕಾಸು ಮಿತಿಗೊಳಿಸುವ ದೃಷ್ಟಿಯಲ್ಲಿ ಬಜೆಟ್‌ನಲ್ಲಿ ಘೋಷಣೆ ಮಾಡಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ದೃಷ್ಟಿಯಿಂದ ಇದು ಆಗಿದೆಯೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಸರ್ಕಾರ ಅವರಿಗೆ ಶೇಕಡ ನೂರರಷ್ಟು ಅನುದಾನ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದೆ. ಆವೊತ್ತು ಶೇಕಡ ನೂರರಷ್ಟು ಅನುದಾನ ಕೊಟ್ಟಿದ್ದರೆ ಅದರಲ್ಲಿ ಶೇಕಡ 15 ರಿಂದ 10ರಷ್ಟು ತೆಗೆದು 75 ಪರ್ಸೆಂಟ್ ಕೊಡಬಹುದಿತ್ತು. ಅದರ ನಂತರ ಬಂದಂತಹ ಸರ್ಕಾರ ಅನುದಾನವನ್ನು 75 ಪರ್ಸೆಂಟ್‌ಗೆ ಇಳಿಸಿತು. ಪುನಃ ಅದರಲ್ಲಿ 25 ಪರ್ಸೆಂಟ್ ತೆಗೆಯುತ್ತೇವೆಂದರೆ ಅದು ಸರಿಯಲ್ಲವೆಂದು ನನ್ನ ಆಕ್ಷೇಪಣೆ. ಈ ಬಗ್ಗೆ ಮಾನ್ಯ ಶ್ರೀಕಂಠಯ್ಯನವರು ಪತ್ರ ಬರೆದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ 'ಇದನ್ನು ಪರಿಶೀಲಿಸಿ' ಎಂದು ತಮಗೆ ಪತ್ರ ಬರೆದಿದ್ದಾರೆ. ಇದೆಲ್ಲ ಆಧಾರವನ್ನು ಇಟ್ಟುಕೊಂಡು ಅವರಿಗೆ ಕೊಡತಕ್ಕ ಅನುದಾನದಲ್ಲಿ ಕಟ್ ಮಾಡಬಾರದೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಪರಿಶೀಲನೆ ಮಾಡೋಣ.

ಅಧ್ಯಕ್ಷರು : ಮಾನ್ಯ ಅಭಯಚಂದ್ರರವರು, ಸದಸ್ಯರು ಗೈರುಹಾಜರು ಇದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಕಳೆದ ಏಪ್ರಿಲ್ ತಿಂಗಳಿನಲ್ಲಿ ಕೇಳಿದ ಪ್ರಶ್ನೆಗೆ ಇವತ್ತು ಲಿಖಿತ ಉತ್ತರ ಬರುತ್ತಿದೆ. ಕಳೆದ ಅಧಿವೇಶನದಲ್ಲಿ ನಾನು ಕೇಳಿದ ಪ್ರಶ್ನೆ ಚುಕ್ಕೆರಹಿತ ಪ್ರಶ್ನೆಯಾಗಿ ಬಂತು. ಅದಕ್ಕೆ ಉತ್ತರ ನವೆಂಬರ್‌ನಲ್ಲಿ ಬರುತ್ತಿದೆ.

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ. ಮಾನ್ಯ ಫೋರ್ಡೆಯವರು ತಿದ್ದುಪಡಿ ಮಸೂದೆಯನ್ನು ಮಂಡಿಸಬೇಕು.

ಶಾಸನ ರಚನೆ

ವಿಧೇಯಕ ಮಂಡನೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ವಿಧೇಯಕವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಮಂಡಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 2000ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ವಿಧೇಯಕವನ್ನು ಮಂಡಿಸಲಾಗಿದೆ. XXX

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕರೆ, ನನ್ನದೊಂದು ಪರ್ಯಾಲೋಚನಾ ಪ್ರಸ್ತಾವವಿದೆ. ನಾನು ಮೂರು ದಿವಸಗಳಿಂದ ಕಾಯುತ್ತಿದ್ದೇನೆ. ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನೀರಾವರಿ ಇಲಾಖೆಯ ಮಸೂದೆ ಮುಗಿದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಎಸ್.ಎಸ್. ಪಾಟೀಲ್ : ನನ್ನದೊಂದು ಅರ್ಧಗಂಟೆ ಕಾಲಾವಕಾಶದ ಚರ್ಚೆ ಇದೆ. ಅದು ಎರಡನೆಯ ಸಲ ಮುಂದೆ ಹೋಗುತ್ತಿದೆ.

ಅಧ್ಯಕ್ಷರು : ಈ ಸ್ಟೇಜ್‌ನಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ತಾವು ಜೀರೋ ಹವರಲ್ಲಿ ರೈಸ್ ಮಾಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ .....

ಅಧ್ಯಕ್ಷರು : ಇದನ್ನು ಕನ್ಸಿಡರೇಶನ್‌ಗೆ ತೆಗೆದುಕೊಂಡಿಲ್ಲ. ಈಗ ನೀರಾವರಿ ಮಸೂದೆ ಬಗ್ಗೆ ಮುಂದುವರೆದ ಚರ್ಚೆ. ನಿನ್ನೆ ಯಾರು ಮಾತನಾಡುತ್ತಿದ್ದರು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೇ, ನನ್ನದು ಒಂದು ಬಿಲ್ ಇದೆ. ಮೂರು ದಿವಸಗಳಿಂದ ನಾನು ಕಾಯುತ್ತಿದ್ದೇನೆ. ದಯವಿಟ್ಟು ಅದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು. ಒಂದು ನಿಮಿಷದಲ್ಲಿ ಮುಗಿಯುತ್ತದೆ.

ಅಧ್ಯಕ್ಷರು : ಇದು ಮುಗಿದ ಮೇಲೆ ತೆಗೆದುಕೊಳ್ಳೋಣ. ಒಂದು ಬಿಲ್ ಮಧ್ಯದಲ್ಲಿ ಇರುವಾಗ ಬೇರೆಯದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನೀರಾವರಿ ಬಿಲ್ ಮುಗಿದ ಮೇಲೆ ನಿಮ್ಮದನ್ನು ತೆಗೆದುಕೊಳ್ಳೋಣ.

ಶ್ರೀ ಎಸ್.ಎಸ್. ಪಾಟೀಲ್ : ನನ್ನ ಒಂದು ಅರ್ಧಗಂಟೆ ಕಾಲಾವಧಿಯ ಚರ್ಚೆ ಎರಡನೇ ಸಲ ಮುಂದೆ ಹೋಗುತ್ತಿದೆ. ಇವತ್ತು ಇದೆಲ್ಲ ತೆಗೆದುಕೊಂಡರೆ ಅದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

XXX ಅನುಬಂಧ I